ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 77/2018

ಸಿ ಡಬ್ಲ್ಯೂ- 7

ಪಿ ಡಬ್ಲ್ಯೂ- 5

ದಿಃ 22-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಮೊಹಮ್ಮದ್ ಅಲಿ |
| ತಂದೆಯ ಹೆಸರುಃ | ಬೀರಣಕುಟ್ಟಿ |
| ವಯಸ್ಸುಃ | 41 ವರ್ಷ |
| ಉದ್ಯೋಗಃ | ವ್ಯಾಪಾರ |
| ವಿಳಾಸಃ | ಯಲ್ಲಾಪುರ |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-6 ಮತ್ತು 8 ರವರ ಪರಿಚಯ ಇರುತ್ತದೆ. ಚಾಸಾ-9 ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಮಾಹಿತಿ ಇರುವುದಿಲ್ಲ. ದಿಃ26-11-2025 ರಂದು ನನಗೆ ನ್ಯಾಯಾಲಯದಿಂದ ಸಮನ್ಸ ಬಂದಾಗ ವಿಷಯ ಗೊತ್ತಾಗಿರುತ್ತದೆ. ನಾನು ಯಾವ ವಿಷಯಕ್ಕಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದು ಗೊತ್ತಿರುವುದಿಲ್ಲ, ಪೊಲೀಸರು ಕೆ ಎಲ್ ಪಾಸಿಂಗ್ ವಾಹನದ ಬಗ್ಗೆ ಸಾಕ್ಷಿ ನುಡಿಯಲು ಸಮನ್ಸ ಜಾರಿ ಮಾಡಿದ್ದರಿಂದ ಬಂದಿರುತ್ತೇನೆ. ಮೃತ ಕೃಷ್ಣ ಗಣಪತಿ ಗೌಡ ಇವರ ಪರಿಚಯವಿರುವುದಿಲ್ಲ. ನಾನು 2016-17ನೇ ಸಾಲಿನಲ್ಲಿ ಚಾಲಕ ವೃತ್ತಿಯಲ್ಲಿದ್ದಾಗ ಯಲ್ಲಾಪುರ ಮಾರ್ಗದಲ್ಲಿ ಯಾವುದೇ ಅಪಘಾತವಾಗಿದ್ದನ್ನು ನೋಡಿರುವುದಿಲ್ಲ. ಈ

ವಿಷಯದ ಕುರಿತು ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ಆರೋಪಿಯನ್ನು ಗುರುತಿಸುವುದಿಲ್ಲ. (ಆರೋಪಿಯು ಗೈರು ಹಾಜರು ಇದ್ದ ಕಾರಣ ಆರೋಪಿಯ ಹೆಸರನ್ನು ಹೇಳಲಾಗಿ, ಸಾಕ್ಷಿಯು ಆರೋಪಿಯನ್ನು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ.)

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ನಾನು ನೇರವಾಗಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ದಿಃ 28-10-2017 ರಂದು ನೀವು ಹಾಗೂ ಚಾಸಾ-8 ರವರು ಇಬ್ಬರೂ ಸೇರಿ ಲಾರಿಯಲ್ಲಿ ಯಲ್ಲಾಪುರ ಕಡೆಯಿಂದ ಅಂಕೋಲಾ ಕಡೆಗೆ ಹೋಗುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಂದೆ ನಿಮ್ಮ ಊರಿನವರಾದ ಹಾಗೂ ನಿಮ್ಮ ಪರಿಚಯದ ಕೃಷ್ಣ ಗಣಪತಿ ಗೌಡ, ಯಲ್ಲಾಪುರ ಇವರು ತನ್ನ ಮೋಟರ್ ಸೈಕಲ್ ನಂ. ಕೆಎ 31 ಡಬ್ಲ್ಯೂ 8074 ನೇದ್ದರಲ್ಲಿ ಯಲ್ಲಾಪುರ ಕಡೆಯಿಂದ ಅಂಕೋಲಾ ಕಡೆಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ನೀವು ಅಂಕೋಲಾ ತಾಲೂಕಿನ ಸುಂಕಸಾಳ ಗ್ರಾಮದ ಪದ್ಮಾಪುರ ಹೆಗ್ಗಾರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ತಲುಪಿದಾಗ ಯಲ್ಲಾಪುರ ಕಡೆಯಿಂದ ಅಂಕೋಲಾ ಕಡೆಗೆ ಹೋಗುತ್ತಿದ್ದ ಲಾರಿ ಚಾಲಕನು ಅತಿವೇಗದಿಂದ ಚಲಾಯಿಸಿಕೊಂಡು

ಹೋಗುತ್ತಿದ್ದು, ಯಲ್ಲಾಪುರ ಕಡೆಯಿಂದ ಅಂಕೋಲಾ ಕಡೆಗೆ ನಿಮ್ಮ ಲಾರಿ ಮುಂದಿನಿಂದ ಬರುತ್ತಿದ್ದ ಕೃಷ್ಣ ಗೌಡ ಇವರ ಮೊಟರ್ ಸೈಕಲ್ಲಿಗೆ ಡಿಕ್ಕಿ ಹೊಡೆದು ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಾನು ಮತ್ತು ಚಾಸಾ-8 ಎಂದಿಗೂ ಸಹ ಒಟ್ಟಗೆ ಲಾರಿಯನ್ನು ಚಲಾಯಿಸಿದ್ದು ಇರುವುದಿಲ್ಲ,ಆತನೇ ಬೇರೆ ಲಾರಿಯನ್ನು ಚಲಾಯಿಸುತ್ತಿದ್ದ ಎಂದು ನುಡಿಯುತ್ತಾರೆ. ಕೃಷ್ಣ ಗೌಡ ಮೋಟರ್ ಸೈಕಲ್ಲಿನ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಬಿದ್ದು, ಲಾರಿಯ ಎಡಬದಿಯಲ್ಲಿ ಅಡಿಗೆ ಸಿಲುಕಿ ಸ್ವಲ್ಪ ದೂರದವರೆಗೆ ಮೋಟರ್ ಸೈಕಲ್ ಸಹಿತ ಎಳೆದುಕೊಂಡು ಹೋಗಿರುತ್ತದೆ, ನಂತರ ಲಾರಿ ಚಾಲಕನು ತನ್ನ ಲಾರಿಯನ್ನು ನಿಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ ನೀವು ಹಾಗೂ ಚಾಸಾ-8 ರವರು ನಿಮ್ಮ ಲಾರಿಯನ್ನು ನಿಲ್ಲಿಸಿ, ಇಳಿದು ಹತ್ತಿರ ಹೋಗಿ ನೋಡಿದಾಗ ಕೃಷ್ಣ ಈತನಿಗೆ ತಲೆಗೆ ಹಾಗೂ ಕೈಕಾಲಿಗೆ ಗಂಭೀರ ಸ್ವರೂಪದ ಪೆಟ್ಟಾಗಿ ಮೃತ ಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಲಾರಿ ನಂ.ಕೆ ಎಲ್ 05/ ಎ ಎಂ 8298 ಆಗಿತ್ತು ಎಂದರೆ ಸರಿಯಲ್ಲ. ನೀವು ಜಾಗದಲ್ಲಿ ಆರೋಪಿಯ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡು, ಕೃಷ್ಣ ಇವರ ಕುಟುಂಬದವರಿಗೆ ವಿಷಯವನ್ನು ತಿಳಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದು, ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿ, ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಪೊಲೀಸರು ನನಗೆ ಸಿಕ್ಕಿರುವುದೇ ಇಲ್ಲ ಹಾಗೂ ನನಗೆ ಏನೂ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು. ನಿಮಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದರೂ ಸಹ, ಪ್ರತ್ಯೇಕ್ಷ

ಸಾಕ್ಷಿದಾರರು ಆಗಿದ್ದರೂ ಸಹ, ಘಟನೆಯು ನಿಮ್ಮ ಎದುರಿಗೆ ನಡೆದಿದ್ದರೂ ಸಹ, ಆರೋಪಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.